ವಿಜಯವಾಣಿ e-Paper

# ಸಂಶೋಧನಾ ವಿದ್ಯಾರ್ಥಿಗಳಿಗೆ ವಿಭಿನ್ನ ಚಿಂತನೆ ಬೇಕು

**ಬೆಂಗಳೂರು:** ಕನ್ನಡದ ಪ್ರಾಚೀನ ಕವಿಗಳ ಮೇಲೆ ಸಂಸ್ಕೃತ ಭಾಷೆಯ ಪ್ರಭಾವ ಎಷ್ಟಿದೆ ಎಂಬುದರ ಸಂಶೋಧನೆಗೆ ಯುವ ಸಂಶೋಧಕರು ಮುಂದಾಗಬೇಕು ಎಂದು ಮೈಸೂರು ವಿಶ್ವವಿದ್ಯಾಲಯದ ನಿವೃತ್ತ ಕನ್ನಡ ಪ್ರಾಧ್ಯಾಪಕ ಪ್ರೊ. ಟಿ.ವಿ. ವೆಂಕಟಾಚಲ ಶಾಸ್ತ್ರಿ ಕರೆ ನೀಡಿದರು.

ಬೆಂಗಳೂರಿನಲ್ಲಿ ಸೋಮವಾರ ಎಂ.ಫಿಲ್. ಪದವಿ ತರಗತಿಗೆ ಚಾಲನೆ ಮತ್ತು 'ಭಾಷಾತಂತ್ರಮ್' ಪುಸ್ತಕ ಬಿಡುಗಡೆ ಸಮಾರಂಭದಲ್ಲಿ ಮಾತನಾಡಿದ ಅವರು, ಕನ್ನಡ ಸಾಹಿತ್ಯ ಮೀಮಾಂಸೆಗೆ ಸಂಸ್ಕೃತ ಮಹತ್ತರವಾದ ಪರಿಕರಗಳನ್ನು ಒದಗಿಸಿದೆ. ಪ್ರಾಚೀನ ಕನ್ನಡ ಕವಿಗಳು ಸಂಸ್ಕೃತದಲ್ಲೇ ತೋಯ್ದು ಹೋಗಿದ್ದಾರೆ. ಪಂಪ, ರನ್ನ ಮುಂತಾದ ಕನ್ನಡ ಕವಿಗಳ ಮೇಲೆ ಸಂಸ್ಕೃತ ಕವಿಗಳ ಪ್ರಭಾವ ಎಷ್ಟಿದೆ ಎಂಬುದರ ಕುರಿತು ಸಂಶೋಧನೆಯಾಗಬೇಕು. ಹಾಗೆಯೇ ಭಾಷಾಂತರ ಪ್ರಕ್ರಿಯೆಯಲ್ಲಿ ಸಂಸ್ಕೃತದ ಪಾತ್ರವೇನು ಎಂಬುವುದನ್ನು ಅರಿಯಲು ಸಂಶೋಧಕರು ಗಮನಹರಿಸಬೇಕು ಎಂದರು.



ಸೋಮವಾರ ನಡೆದ ಎಂ.ಫಿಲ್ ಪದವಿ ತರಗತಿ ಉದ್ಘಾಟನಾ ಕಾರ್ಯಕ್ರಮದಲ್ಲಿ ಪ್ರೊ. ಮಲ್ಲೇಪುರಂ ವೆಂಕಟೇಶ್, ಪ್ರೊ. ವೆಂಕಟಾಚಲ ಶಾಸ್ತ್ರಿ ಮತ್ತಿತರರು ಉಪಸ್ಥಿತರಿದ್ದರು.

ಕಲೆ, ಶಾಸ್ತ್ರಗಳಿಗೆ ಸಂಬಂಧಿಸಿದ ಸಹಸ್ರಾರು ಸಂಸ್ಕೃತ ಗ್ರಂಥಗಳು ಮುದ್ರಣ ಕಾಣದೆ ಹಾಗೆಯೇ ಉಳಿದಿವೆ. ಇಂತಹ ಗ್ರಂಥಗಳ ಕುರಿತು ಸಂಶೋಧನೆಯಾಗಬೇಕು. ಇದು ಇತಿಹಾಸ ಹಾಗೂ ಭಾಷೆಯ ಕುರಿತು ಮತ್ತಷ್ಟು ತಿಳಿದುಕೊಳ್ಳಲು ಸಹಾಯಕವಾಗುತ್ತದೆ. ಸಂಶೋಧನಾ ವಿದ್ಯಾರ್ಥಿಗಳು ಇಂತಹ ವಿಭಿನ್ನ ಅಂಶಗಳತ್ತ ಆಸಕ್ತಿ ಬೆಳೆಸಿಕೊಳ್ಳಬೇಕು ಎಂದು ಕರೆ ನೀಡಿದರು.

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಕುಲಪತಿ ಪ್ರೊ.ಮಲ್ಲೇಪುರಂ ಜಿ. ವೆಂಕಟೇಶ್ ಮಾತನಾಡಿ, ಸಂಶೋಧನೆ ಸಾಕಷ್ಟು ತಾಳ್ಮೆ ಹಾಗೂ ಪರಿಶ್ರಮ ಬಯಸುವ ಕ್ಷೇತ್ರವಾಗಿದ್ದು ವಿದ್ಯಾರ್ಥಿಗಳು ಮಾನಸಿಕವಾಗಿ ಸಿದ್ಧರಿರಬೇಕು. ಅಂತಾರಾಷ್ಟ್ರೀಯ ವಿಷಯಗಳ ಮೇಲೆ ಹೆಚ್ಚಿನ ಗಮನಹರಿಸಬೇಕು ಎಂದರು.

ಡಾ. ಶ್ಯಾಮಶಾಸ್ತ್ರಿ ರಚಿಸಿರುವ ಭಾಷಾತಂತ್ರಮ್ ಪುಸ್ತಕ ಬಿಡುಗಡೆಗೊಳಿಸಲಾಯಿತು. ಸಂಸ್ಕೃತ ವಿಶ್ವವಿದ್ಯಾಲಯದ ಕುಲಸಚಿವ ಪ್ರೊ.ವೈ.ಎಸ್.ಸಿದ್ದೇಗೌಡ, ಎಂ.ಫಿಲ್. ಪದವಿ ತರಗತಿ ಸಂಯೋಜಕ ಪ್ರೊ. ಎಂ.ಕೆ.ಶ್ರೀಧರ್ ಉಪಸ್ಥಿತರಿದ್ದರು.